<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>

ಸಿಸಿ ನಂಬರ್.1530/2023

| | | |
|---|---|---|
| ಸಾಕ್ಷಿಯ ಹೆಸರು | : ಕೃಷ್ಣ ಹನುಮಂತಪ್ಪ ಸಾರಥಿ | ಸಿ.ಡಬ್ಲ್ಯು 1 |
| ತಂದೆಯ ಹೆಸರು | : ಹನುಮಂತಪ್ಪ | ಪಿ.ಡಬ್ಲ್ಯು 1 |
| ವಯಸ್ಸು | : 39 ವರ್ಷ | |
| ಉದ್ಯೋಗ | : ವಲಯ ಅರಣ್ಯಾಧಿಕಾರಿಗಳು | |
| ವಾಸ ಸ್ಥಳ | : ಭದ್ರಾವತಿ ಎಂ.ಪಿ.ಎಮ್. | |

<u>ದಿನಾಂಕಃ15.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು:</u>

<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>

ಚಾಸ-2 ಮತ್ತು 3 ನನ್ನ ಸಿಬ್ಬಂದಿ ಇರುತ್ತಾರೆ. ಆರೋಪಿಗಳ ಪರಿಚಯ ಇದೆ. ಅವರು ಗಂಟೆ ಕಣಿವೆ ಗ್ರಾಮದ ನಿವಾಸಿಗಳು ಇರುತ್ತಾರೆ. ದಿನಾಂಕ 06.07.2023 ರಂದು ಮದ್ಯಾಹ್ನ 12.30 ಯಿಂದ 1.30 ಗಂಟೆಯ ಮಧ್ಯದಲ್ಲಿ ತರೀಕೆರೆ ಪೋಲೀಸ್ ಠಾಣಾ ವ್ಯಾಪ್ತಿಯ ಹೆಚ್.ರಂಗಾಪುರ ಗ್ರಾಮದ ಸರ್ವೆ ನಂ. 9, 11 ಮತ್ತು ಹೊರಳಿಹಳ್ಳಿ ಗ್ರಾಮದ ಸರ್ವೆ ನಂ.60 ಒಟ್ಟು 115 ಹೆಕ್ಟರ್ ನಡುತೋಪಿನ ಪ್ರದೇಶದಲ್ಲಿ ನಾನು ನನ್ನ ಸಿಬ್ಬಂದಿಯೊಂದಿಗೆ ಗಸ್ತು ಕರ್ತವ್ಯದಲ್ಲಿದ್ದಾಗ ಆರೋಪಿತರು ಅಕ್ರಮ ಕೂಟ ರಚಿಸಿಕೊಂಡು ಏಕಾಏಕಿ ಅರಣ್ಯ ಪ್ರದೇಶದೊಳಗೆ ಅತಿಕ್ರಮ ಪ್ರವೇಶ ಮಾಡಿ ತೆಂಗಿನ ಗಿಡಗಳನ್ನು ನೆಡಲು ಪ್ರಯತ್ನ ಮಾಡಲು ಪ್ರಾರಂಭ ಮಾಡಿದರು. ಹಾಗೂ ಸರ್ಕಾರದವರು ಹಾಕಿದ್ದ ನಡು ಸಸಿಗಳನ್ನು ಕಿತ್ತು ಹಾಕಲು ಪ್ರಾರಂಭಮಾಡಿದರು. ಅದರಲ್ಲಿ ಕೆಲವು ಶ್ರೀಗಂಧದ ಸಸಿಗಳು ಇದ್ದವು. ನಾವು ಅವರನ್ನು ತಡೆಯಲು ಹೋದಾಗ ಆರೋಪಿತರು ನಮಗೆ ಅವಾಚ್ಯ ಶಬ್ಧಗಳಿಂದ ಬೈಯಲು ಪ್ರಾರಂಭ ಮಾಡಿದರು. ನಮ್ಮ ಸಿಬ್ಬಂದಿಗೆ ಕೈಯಿಂದ ಕೂಡ ಹಲ್ಲೆ ಮಾಡಿರುತ್ತಾರೆ. ಈ ಬಗ್ಗೆ ನಾನೇ ದೂರನ್ನು ಕೊಟ್ಟಿರುತ್ತೇನೆ. ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು 1(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ</u>

ಸರ್ವೆ ನಂ.9, 11 ಮತ್ತು 60 ಒಟ್ಟು ಜಮೀನು ಇಲ್ಲಿಯವರೆಗೆ ದುರಸ್ತು ಆಗಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ. 9,11 ಮತ್ತು 60 ಜಮೀನುಗಳು ಎಂ.ಪಿ.ಎಂ. ಅರಣ್ಯ ಪ್ರದೇಶಕ್ಕೆ ಸೇರಿದ ಜಮೀನುಗಳು ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿದ್ದೇನೆ. ಮೇಲಿನ ಸರ್ವೆ ನಂಬರ್ ಗಳು ಅರಣ್ಯ ಇಲಾಖೆ ಮತ್ತು ಕಂದಾಯ ಇಲಾಖೆಯಿಂದ ಜಂಟಿ ಸರ್ವೆ ಆಗಿರುತ್ತವೆ. ಸರ್ವೆ ನಂ.60 ರಲ್ಲಿ ಕಂದಾಯ ಇಲಾಖೆಯಿಂದ ಗ್ರಾಮದ ಜಮೀನು ರಹಿತ ವ್ಯಕ್ತಿಗಳಿಗೆ ಕೂಡ ಜಮೀನು ಮಂಜೂರಿ ಮಾಡಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ತಮಗೆ ಸರ್ಕಾರದವರು ಮಂಜೂರಿ ಮಾಡಿದ ಜಮೀನಿನಲ್ಲಿ ಆರೋಪಿಗಳು ವ್ಯವಸಾಯ ಮಾಡಿಕೊಳ್ಳುತ್ತಿದ್ದಾರೆ, ಅರಣ್ಯ ಪ್ರದೇಶಕ್ಕೂ ಮತ್ತು ಅವರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ಅರಣ್ಯ ಪ್ರದೇಶದಲ್ಲಿ ಯಾವುದೇ ಅತಿಕ್ರಮ ಪ್ರವೇಶ ಮಾಡಿಲ್ಲ, ನಮಗೆ ಅವಾಚ್ಯವಾಗಿ ಬೈದಿಲ್ಲ, ನನ್ನ ಸಿಬ್ಬಂದಿಗೆ ಯಾವುದೇ ಹಲ್ಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ಕೊಟ್ಟು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

<u>ಮರು ವಿಚಾರಣೆಃಇಲ್ಲ</u>

ಓ ಹೇ ಕೇ ಸ ಇ ಎ ಒ

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.